ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ಶ್ರೀ ಕೆ ಆರ್ ವಕೀಲರಿಂದಃ-

ಈ ದಿನ ಪಿ ಡಬ್ಲ್ಯೂ -1 ರವರು ದಾವಾ ಆಸ್ತಿಗೆ ಸಂಬಂಧಪಟ್ಟ 4 ಪೋಟೋ, ಒಂದು ಸಿ ಡಿ ಮತ್ತು ಒಂದು ರಶೀದಿಯನ್ನು ಹಾಜರು ಮಾಡಿದ್ದು ನಾಲ್ಕು ಪೋಟೋಗಳನ್ನು ಕ್ರಮವಾಗಿ ನಿಪಿ-7 ರಿಂದ ನಿಪಿ-10 ಎಂದು, ಸಿಡಿಯನ್ನು ನಿಪಿ-7(ಎ) ಎಂದು, ರಶೀದಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ ಬಿ ವಿ ವಕೀಲರಿಂದಃ

ಪೋಟೋವನ್ನು ರಮೇಶ್ ಎನ್ನುವವರು ತೆಗೆದಿರುತ್ತಾರೆ. ಪೋಟೋ ತೆಗೆಯುವ ದಿನ ನಾನೂ ಸಹ ಅವರ ಜೊತೆ ಹೋಗಿದ್ದೆ. ಆದರೆ ನಾನು ಮನೆಯ ಒಳಗೆ ಹೋಗಿರಲಿಲ್ಲ. ಪೋಟೋ ತೆಗೆಯು ದಿನ ನಾವು ಗೇಟಿನ ಒಳಗೆ ಹೋಗಿದ್ದೆವು. ನಾನು ಹಾಜರು ಪಡಿಸಿರುವ 4 ಪೋಟೋಗಳಲ್ಲಿ 2 ಪೋಟೋದಲ್ಲಿ ಗೇಟನ್ನು ಮೂಚ್ಚಿರುವ ಬಗ್ಗೆ ತೋರಿಸಿರುತ್ತದೆ ಎಂದರೆ ಸರಿ. ನಿಪಿ-9 ರಲ್ಲಿ ತೋರಿಸಿರುವ ಎರಡು ಕಿಟಿಕಿ ಮತ್ತು ಒಂದು ಬಾಗಿಲು ಇರುವ ಮನೆಯು ಶಾಂತಮ್ಮ ಎಂಬುವವರಿಗೆ ಸೇರಿರುತ್ತದೆ.

ನ್ಯಾಯಾಲಯದ ಪ್ರಶ್ನೆಃ ನಿಪಿ-9 ರ ಎಡಬದಿಗೆ ಇರುವ ಒಂದೇ ಬಾಗಿಲು

ಇರುವ ಮನೆ ಯಾರಿಗೆ ಸೇರಿರುತ್ತದೆ?
ಉತ್ತರಃ ಸಾಕ್ಷಿಯು ರಮೇಶ್ ಎಂಬುವವರಿಗೆ ಸೇರಿರುತ್ತದೆ ಎಂದು ನುಡಿಯುತ್ತಾರೆ.

ಶಾಂತಮ್ಮ ರವರ ಮನೆಯ ಚಕ್ಕುಬಂದಿ ನನಗೆ ಗೊತ್ತಿಲ್ಲ. ನಿಪಿ-7 ಮತ್ತು ನಿಪಿ-8 ಫೋಟೋಗಳನ್ನು ದಾವಾ ಆಸ್ತಿಯು ಹೊರಗಡೆಯಿಂದ ಹೇಗೆ ಕಾಣಿಸುತ್ತದೆ ಎಂದು ತೋರಿಸಲು ತೆಗೆಯಲಾಗಿದೆ ಎಂದು ನುಡಿಯುತ್ತಾರೆ. ನಿಪಿ-7 ಮತ್ತು ನಿಪಿ-8 ರಲ್ಲಿ ಕಾಣುವಂತ ಅಂಗಡಿ ಮಳಿಗೆಗಳು ಮತ್ತು ಮನೆಗಳು ಯಾರಿಗೆ ಸೇರಿರುತ್ತವೆ ಎಂದರೆ ಸಾಕ್ಷಿಯು ಸುರೇಶ್ ರವರಿಗೆ ಸೇರಿರುತ್ತವೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಅದರಲ್ಲಿ ರುವ ಮನೆಯ ಫೋಟೋವನ್ನು ತಾವು ತೆಗೆದಿರುವುದಿಲ್ಲ ಎಂದರೆ ಸಾಕ್ಷಿಯು ಆ ಫೋಟೋ ವನ್ನು ನೋಡಿ ಸಾಕ್ಷಿಯು ಫೋಟೋವನ್ನು ನೋಡಿ ಅದರಲ್ಲಿ ಇರುವ ಮನೆಯ ಫೋಟೋವನ್ನು ತೆಗೆದಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ನುಡಿದ ಫೋಟೋವನ್ನು ನಿಡಿ-7 ಎಂದು ಗುರುತಿಸಲಾಯಿತು. ನಿಡಿ-7 ರಲ್ಲಿ ತೋರಿಸಿರುವ ಮನೆ ಒಂದು ಅಂತಸ್ತಿನ ಮನೆ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಡಿ-7 ರಲ್ಲಿ ಇರುವ ಕೆಳ ಅಂತಸ್ತಿನ ಮನೆಯನ್ನು ತೋರಿಸಿ ಸದರಿ ಮನೆಗೆ ಸಂಬಂಧಪಟ್ಟಂತೆ ಕ್ರಯದ ಕರಾರು ಆಗಿರುತ್ತದೆ ಎಂದು ನಾನು ದಾವೆ ದಾಖಲಿಸಿರುತ್ತೇನೆ ಎಂದರೆ ಸಾಕ್ಷಿಯು ಸದರಿ ಫೋಟೋವನ್ನು ನೋಡಿ clarity ಇಲ್ಲವೆಂದು ನುಡಿಯುತ್ತಾರೆ. ನಾನು

ನಿಪಿ-7 ರಿಂದ ನಿಪಿ-10 ಪೊಟೋಗಳನ್ನು ತೆಗೆಯಲು ಹೋದ ಸಮಯದಲ್ಲೂ ಸಹ ನಿಡಿ-7 ರಂತೆ ಕಟ್ಟಡ ಇತ್ತು ಎಂದರೆ ಸರಿ. ನಿಡಿ-7 ರಲ್ಲಿ ಇರುವ ಮನೆಗೆ ಬೃಂದಾವನಾ ಮಹಿಳಾ ಕಳಂಜಿಯ ಒಕ್ಕೂಟ ಎಂದು ಬೋರ್ಡನ್ನು ಹಾಕಲಾಗಿರುತ್ತದೆ ಎಂದರೆ ಸಾಕ್ಷಿಯು ನಾನು ಅದನ್ನು ಗಮನಿಸಿಲ್ಲ ಎಂದು ನುಡಿಯುತ್ತಾರೆ. ನಿಡಿ-7 ಮೊದಲ ಅಂತಸ್ತಿನಲ್ಲಿ ಇರುವ ಮನೆಯನ್ನು ರಮೇಶ್ ರವರ ಮೊದಲನೇ ಹೆಂಡತಿಯ ಮಗನಾದ 3 ನೇ ಪ್ರತಿವಾದಿ ಮೋಹಿತ್ ರವರ ಹೆಸರಿಗೆ ವ್ಯವಸ್ಥಾ ಪತ್ರದ ಮೂಲಕ ಅವರ ಅಜ್ಜಿಯಾದ ಶಾಂತಮ್ಮ ನವರು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-7 ರಲ್ಲಿ ಇರುವ ಕೆಳ ಅಂತಸ್ತಿನ ಮನೆಯು ಕ್ಯಾಸಾಪುರದ ಶೇಖರ್ ಎಂಬುವವರಿಗೆ ಭೋಗ್ಯವಾಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಶೇಖರ್ ರವರ ನಂತರ ರುಕ್ಮಿಣಿ ಎಂಬ ನ್ಯಾಯಾಲಯದ ನೌಕರವರ ಹೆಸರಿಗೆ ಭೋಗ್ಯವಾಗಿತ್ತು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈಗ ಸದರಿ ಮನೆಯಲ್ಲಿ ಬೃಂದಾವನಾ ಮಹಿಳಾ ಕಳಂಜಿಯ ಒಕ್ಕೂಟದವರು ಭೋಗ್ಯಕ್ಕೆ ಇರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ನಿಡಿ-7 ರಲ್ಲಿ ತೋರಿಸಿರುವ ಕೆಳ ಅಂತಸ್ತಿನ ಮನೆ ಯಾರ ಹೆಸರಿನಲ್ಲಿ ಇರುತ್ತದೆ, ಮತ್ತು ಅದರಲ್ಲಿ ಯಾರು ಯಾರು ಇದ್ದರು ಮತ್ತು ಈಗ ಯಾರು ಇದ್ದಾರೆ ಎಂದ ಬಗ್ಗೆ ಕೇಳಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಅದರಲ್ಲಿ ಇರುವ ಸ್ವತ್ತಿನ ಬಗ್ಗೆ ನನಗೆ clarity ಇರುವುದಿಲ್ಲ

ಮತ್ತು ಅದರಲ್ಲಿ ಯಾರು ಇದ್ದರು ಮತ್ತು ಈಗ ಯಾರು ಇದ್ದಾರೆ ಎಂಬುದು ನನಗೆ ಗೊತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನೀವು ಹೇಳುವಂತೆ ಯಾವುದೇ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿರುವುದಿಲ್ಲ, ಯಾವ ಕ್ರಯದ ವ್ಯವಹಾರವೂ ಆಗಿರುವುದೂ ಇಲ್ಲ, ಯಾವುದೇ ಹಣವನ್ನೂ ನೀಡಿರುವುದಿಲ್ಲ ಆ ಕಾರಣದಿಂದ ನಾನು ಹೇಳುವಂತಹ ಕರಾರುಪತ್ರದಲ್ಲಿ ತೋರಿಸಿರುವ ಚಕ್ಕುಬಂದಿಯ ಆಸ್ತಿ ನನಗೆ ತಿಳಿದಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ.

ನಾನು ನ್ಯಾಯಬದ್ಧವಾಗಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕ್ರಯದ ಕರಾರನ್ನು ಮಾಡಿಕೊಂಡಿದ್ದರೆ ನಿಡಿ-7 ರಲ್ಲಿ ತೋರಿಸಿರುವ ಮನೆಯ ಭಾವ ಚಿತ್ರವನ್ನು ನಾನು ಈ ದಿನ ನ್ಯಾಯಾಲಯದಲ್ಲಿ ಹಾಜರು ಪಡಿಸುತ್ತಿದ್ದೆ ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ. ನಿಡಿ-7 ರಲ್ಲಿ ತೋರಿಸಿರುವ ಮನೆಯು ಈ ದಿನ ನಾನು ಹಾಜರು ಪಡಿಸಿರುವ ನಿಪಿ-7 ಮತ್ತು ನಿಪಿ-8 ಪೋಟೋದಲ್ಲಿ ಇರುವ ಗೇಟಿನ ಒಳಗಡೆ ಇರುತ್ತದೆ ಎಂದರೆ ಸರಿ.

ಸಾಕ್ಷಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕ್ರಯದ ಕರಾರು ಮಾಡಿಕೊಳ್ಳುವ ಪೂರ್ವದಲ್ಲಿ ಸರ್ಕಾರಿ ನೌಕರನಾಗಿರುವುದರಿಂದ ಮನೆಯನ್ನು ಖರೀದಿಸುವ ಬಗ್ಗೆ ಪೂರ್ವಾನುಮತಿಯನ್ನು ಸರ್ಕಾರದಿಂದ ಪಡೆದಿರುತ್ತೀರಾ ಎಂದರೆ ಸಾಕ್ಷಿಯು  ಕರಾರು ಪತ್ರವಾಗುವ ಪೂರ್ವದಲ್ಲಿ ನಾನು ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ರಾಮನಗರ ತಾಲ್ಲೂಕು ಪಾದರಹಳ್ಳಿಯಲ್ಲಿಯೂ ಸಹ ಶಿಕ್ಷಕನಾಗಿ ಕೆಲಸ ಮಾಡಿದ್ದೇನೆ ಎಂದರೆ ಸರಿ. ನಾನು ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದ ಸಮಯ ನನ್ನನ್ನು ಸೇವೆಯಿಂದ ಅಮಾನತ್ತು ಮಾಡಿದ್ದರು ಎಂದರೆ ಸಾಕ್ಷಿಯು ನಾನು ರಾಜಕೀಯ ವ್ಯಕ್ತಿಗಳ ಜೊತೆಯಲಿ ಇರುತ್ತಿದ್ದೆ ಎಂಬ ವಿಷಯಕ್ಕೆ ನನ್ನನ್ನು 2001 ರಲ್ಲಿ ಅಮಾನತ್ತು ಪಡಿಸಿದ್ದರು, ಆದರೆ ನನ್ನ ಕೆಲಸಕ್ಕೆ ಸಂಬಂಧಪಟ್ಟಂತೆ ಅಮಾನತ್ತು ಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಅಮಾನತ್ತು ಆಗಿದ್ದ ಸಮಯ ನಾನು ಶಿಕ್ಷಕನಾಗಿ ಕೆಲಸ ಮಾಡಿಲ್ಲ ಎಂದರೆ ಸರಿ. ಈ ಹಿಂದೆ ನನ್ನ ಮೇಲೆ 2-3 ಕ್ರಿಮಿನಲ್ ಮೊಕದ್ದಮೆ ದಾಖಲಾಗಿದ್ದವು ಎಂದರೆ ಸಾಕ್ಷಿಯು ರಾಜಕೀಯ ಉದ್ದೇದಿಂದ ಮಾಡಲಾಗಿತ್ತು ಎಂದು ನುಡಿಯುತ್ತಾರೆ. ನನ್ನ ಮೇಲೇ ಚೆಕ್ ಬೌನ್ಸ್ ಕೇಸುಗಳು ದಾಖಲಾಗಿವೆ ಎಂದರೆ ಸರಿಯಲ್ಲ.

ನಿಡಿ-7 ರಲ್ಲಿ ತೋರಿಸಿರುವ ಮನೆ ರಾಮನಗರದ ಹೃದಯ ಭಾಗದಲ್ಲಿ ಇದೆ ಮತ್ತು ಅದರ ಬೆಲೆಯು ಕ್ರಯದ ಕರಾರುಪತ್ರ ಆಗಿದೆ ಎಂದು ಹೇಳುವ ಸಮಯದಲ್ಲಿ ರೂ. ಒಂದು ಕೋಟಿಗಿಂತಲೂ ಹೆಚ್ಚು ಬೆಲೆ ಬಾಳುತ್ತಿತ್ತು ಎಂದರೆ ಸಾಕ್ಷಿಯು ಅದಕ್ಕೆ ಅಷ್ಟು ಬೆಲೆ ಇರಲಿಲ್ಲ ಎಂದು ನುಡಿಯುತ್ತಾರೆ. ರಮೇಶ್ ರವರು ದುಷ್ಚಟಕ್ಕೆ ಬಲಿಯಾಗಿದ್ದುದ್ದರಿಂದ ಅವರ ಹೆಂಡತಿಯ ಬಳಿ ಇದ್ದ ಹಣ ಒಡವೆ ಎಲ್ಲವನ್ನೂ ಕಳೆದುಕೊಂಡಿದ್ದರು ಎಂದರೆ ಸಾಕ್ಷಿಯು ಅದು ನನಗೆ ಗೊತಿಲ್ಲ ಎಂದು ನುಡಿಯುತ್ತಾರೆ. ರಮೇಶ್ ರವರು ಪ್ರತಿವಾದಿ 1 ರವರ ಹೆಂಡತಿ ರವರನ್ನು ಕರೆದುಕೊಂಡು ಹೋಗಿ ಅವರ ಹೆಸರಿನಲ್ಲಿದ್ದ ಆಸ್ತಿಯನ್ನು ಹೆಂಡತಿಯ ಹೆಸರಿಗೆ ಬರೆಸುತ್ತೇನೆ ಎಂದು ಹೇಳಿ ಅವರಿಂದ ಸಹಿ

ಪಡೆಯುತ್ತಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. ರಮೇಶ್ ರವರು ದುಷ್ಚಟಕ್ಕೆ ಬಲಿಯಾಗಿದುದ್ದರಿಂದ ಅವರ ದುಷ್ಚಟಗಳನ್ನು ಉಪಯೋಗಿಸಿಕೊಂಡು ನಿಪಿ-1 ರಂತೆ ಕ್ರಯದ ಕರಾರು ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆದುದ್ದರಿಂದ ನಾನು ನ್ಯಾಯಾಲಯದಿಂದ ಯಾವುದೇ ಆದೇಶವನ್ನು ಪಡೆದುಕೊಳ್ಳಲು ಅರ್ಹನಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡುವಂತಹ ಅವಶ್ಯಕತೆ ಪ್ರತಿವಾದಿಯರಿಗೆ ಇರಲಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಬಗ್ಗೆ ನನಗೆ ಸರಿಯಾಗಿ ತಿಳಿದಿಲ್ಲದಿರುವುದರಿಂದ ನೋಟಿಸಿನಲ್ಲಿ ಇರುವ ವಿಷಯಕ್ಕೂ, ದಾವೆಯಲ್ಲಿ ಹೇಳಿರುವ ವಿಷಯಕ್ಕೂ ಮತ್ತು ನಾನು ನುಡಿದಿರುವ ಸಾಕ್ಷಿಗೂ ಒಂದಕ್ಕೊಂದು ತಾಳೆಯಾಗುತ್ತಿಲ್ಲ ಎಂದರೆ ಸರಿಯಲ್ಲ. ನಾನು ಕಾನೂನು ಬದ್ಧವಾಗಿ ಕ್ರಯದ ಕರಾರು ಪತ್ರ ಮಾಡಿಕೊಂಡಿದ್ದರೇ ದಾವಾ ಆಸ್ತಿಯನ್ನು ಸರಿಯಾಗಿ ನೋಡಿ ವಿಚಾರಿಸಿ ಮತ್ತು ದಾಖಲಾತಿಗಳನ್ನು ಪರೀಶಿಲಿಸಿ ಕರಾರು ಪತ್ರ ಮಾಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ.

ನಾನು ರಾಜಕೀಯ ವ್ಯಕ್ತಿಗಳ ಜೊತೆ ಸೇರಿ ರಮೇಶರವರ ದುಷ್ಚಟಗಳನ್ನು ತಿಳಿದುಕೊಂಡು ವಂಚನೆಯಿಂದ ಕ್ರಯದ ಕರಾರು ಪತ್ರವನ್ನು ನಿಪಿ-1 ರಂತೆ ನನ್ನ ಹೆಸರಿಗೆ ಸೃಷ್ಟಿಸಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಶಿಕ್ಷಕನಾಗಿ ವೃತ್ತಿ ಜೀವನವನ್ನು ಮಾಡುವುದಕ್ಕಿಂತ ಹೆಚ್ಚು ಇಂತಹ ವ್ಯವಹಾರಗಳನ್ನು ಮಾಡಿಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರಿಗೆ ದಾವಾ ಆಸ್ತಿ ಯನ್ನು ಬಿಟ್ಟು ಬೇರೆ ಮನೆ ಇರುವುದಿಲ್ಲ

ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ದಾವೆ ಸಲ್ಲಿಸಿ ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಉದ್ದೇಶ ಪೂರ್ವಕವಾಗಿ ರಮೇಶ್ ರವರು ಬದುಕಿದ್ದಾಗಲೇ ಯಾವುದೇ ನೋಟೀಸು ಕಳುಹಿಸಿರುವುದಿಲ್ಲ ದಾವೆಯನ್ನು ಸಹ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಯಾವುದೇ ನೋಟೀಸು ಕಳುಹಿಸಿಲ್ಲ ಮತ್ತು ದಾವೆಯನ್ನು ಸಹ ಹಾಕಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.